# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **278** |
| **ಸದಸ್ಯರ ಹೆಸರು** | **ಶ್ರೀ. ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **12.08.2025** |
| **ಉತ್ತರಿಸುವ ಸಚಿವರು** | **ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.** |

| .ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷದಲ್ಲಿ ಎಷ್ಟು ಗಣಿ ಪರವಾನಿಗೆ ನೀಡಲಾಗಿದೆ; (ಹೆಸರು ಸಮೇತ ಮಾಹಿತಿ ನೀಡುವುದು) | • ಬೀದರ್ ಜಿಲ್ಲೆಯಲ್ಲಿ ಕಳೆದ 02 ವರ್ಷಗಳಲ್ಲಿ ಮುಖ್ಯ ಖನಿಜಗಣಿಗಾರಿಕೆ ಯಾವುದೇ ಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ.<br>• 2023-24ನೇ ಸಾಲಿನಿಂದ ಇಲ್ಲಿಯವರೆಗೆ ಉಪಖನಿಜ ಗಣಿಗಾರಿಕೆಗಾಗಿ ಒಟ್ಟು 10 ಸಂಖ್ಯೆಯ ಲೈಸೆನ್ಸ್ ಗಳನ್ನು ಮಂಜೂರು ಮಾಡಲಾಗಿರುತ್ತದೆ. **ವಿವರಗಳನ್ನು ಅನುಬಂಧದಲ್ಲಿ ಪೂರೈಸಿದೆ.** |
| ಆ) | ಗಣಿ ಪರವಾನಗಿ ನೀಡಬೇಕಾದರೆ ಸರ್ಕಾರದ ಮಾನದಂಡಗಳೇನು; (ಮಾಹಿತಿ ನೀಡುವುದು) | • ಮುಖ್ಯ ಖನಿಜಗಳ ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 10(B) ರಡಿಯಲ್ಲಿ ಹರಾಜು ಮೂಲಕ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಎಂಎಂಡಿಆರ್ ತಿದ್ದುಪಡಿ ಕಾಯ್ದೆ, 2015 ರ ಕಲಂ 11 ರಡಿಯಲ್ಲಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ನ್ನು ಸದರಿ ಕಾಯ್ದೆಯಡಿಯಲ್ಲಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್ ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015 ಮತ್ತು Mineral (Other Than Atomic and Hydro Carbons Energy Minerals) Concession Rules 2016 ರಡಿ ಗಣಿಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.<br>• ಎಂ.ಎಂ. (ಡಿ & ಆರ್) 1957 ರ ಸೆಕ್ಷನ್-15 ರಂತೆ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನಿಯಂತ್ರಣ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳಂತೆ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.<br>• ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುರುತಿಸಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದ ನಂತರ ಅಧಿಸೂಚನೆ ಜಾರಿ ಮಾಡಬೇಕಾಗಿರುತ್ತದೆ. ನಂತರ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಗುರುತಿಸಿರುವ ಉಪಖನಿಜದ ನಿಕ್ಷೇಪದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಂಡು ನಿರ್ದಿಷ್ಟ ಉಪಖನಿಜಗಳಿಗೆ ಸರ್ಕಾರದಿಂದ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದಂತೆ ನಿರ್ದೇಶಕರಿಂದ ಬಿಡ್ ಸ್ವೀಕರಿಸಿಕೊಂಡ ನಂತರ ಯಶಸ್ವಿ ಬಿಡ್ ದಾರರಿಂದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತದೆ.<br>• ದಿ:17-03-2023 ರಂದು ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ನ್ನು ಜಾರಿಗೆ ತಂದಿದ್ದು, ದಿನಾಂಕ: 12-08-2016ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗಿದ್ದು, ಸದರಿ ಅರ್ಜಿಗಳ ಪ್ರದೇಶಕ್ಕೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದ |

| | | |
|---|---|---|
| | | ನಂತರ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮವಹಿಸಬೇಕಾಗಿರುತ್ತದೆ.<br>• ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ ಪೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ. |
| ಇ) | ಗಣಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಜೀವಭದ್ರತೆಗೆ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು) | Mines Act-1952 ರಂತೆ ಗಣಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಸೌಲಭ್ಯಗಳ ಕುರಿತು ಕ್ರಮಕೈಗೊಳ್ಳುವ ಪ್ರಕ್ರಿಯೆಯು ಕೇಂದ್ರ ಸರ್ಕಾರದ Director General Mines Safety (DGMS) ರವರ ವ್ಯಾಪ್ತಿಗೆ ಬರುತ್ತದೆ. |

ಸಂಖ್ಯೆ ಸಿಐ -ಎಂಎಂಎನ್/204/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ

**2023-24 ನೇ ಸಾಲಿನಿಂದ ಇಲ್ಲಿಯವರೆಗೆ ಬೀದರ ಜಿಲ್ಲೆಯಲ್ಲಿ ಮಂಜೂರಾಗಿರುವ ಉಪಖನಿಜ ಗಣಿ ಲೈಸೆನ್ಸ್ ಗಳ ವಿವರ**

| ಕ್ರ. ಸಂ. | ಕಲ್ಲುಗಣಿ ಮಾಲೀಕರ ಹೆಸರು | ತಾಲ್ಲೂಕು | ಗ್ರಾಮ | ಖನಿಜ | ಸರ್ವೆ. ನಂ | ಜಮೀನಿನ ವಿಧ | ವಿಸ್ತೀರ್ಣ (ಎಕರೆಗಳಲ್ಲಿ) | ದಿನಾಂಕ | ಅವಧಿ (ವರ್ಷಗಳಲ್ಲಿ) |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಶ್ರೀ ಸ್ವಾಮಿ ಸಮರ್ಥ ಇಂಜಿನಿಯರ್ಸ್ ಲಿಮಿಟೆಡ್ | ಭಾಲ್ಕಿ | ನಿರಮನಹಳ್ಳಿ | ಕಟ್ಟಡ ಕಲ್ಲು (ಟ್ರಾಪ್) | 61/2 | ಪಟ್ಟಾ | 2–27 | 22-08-2023 | 10 |
| 2 | ಶ್ರೀ.ರಾಜಶೇಖರ ತಂದೆ ಸೋಮಶೇಖರ ಪಾಟೀಲ್ | ಚಿಟಗುಪ್ಪಾ | ತಾಳಮಡಗಿ | ಲ್ಯಾಟರೈಟ್ | 198/12, 13, 14, 15 | ಪಟ್ಟಾ | 3–00 | 16-02-2024 | 30 |
| 3 | ಶ್ರೀ ಸೈಯದ ಅಲಿ ತಂದೆ ಮುಕುಬುಲ್ ಸಾಬ | ಬೀದರ | ಖಾಜಾಪೂರ | ಕಟ್ಟಡ ಕಲ್ಲು (ಟ್ರಾಪ್) | 45/2 | ಪಟ್ಟಾ | 1–00 | 16-03-2024 | 30 |
| 4 | ಶ್ರೀಮತಿ ಅರ್ಚನಾ ಗಂಡ ಶರಣಪ್ಪಾ ಮಾಳಿ | ಬಸವಕಲ್ಯಾಣ | ಚಿಕ್ಕನಗಾಂವ | ಕಟ್ಟಡ ಕಲ್ಲು (ಟ್ರಾಪ್) | 146/1 | ಪಟ್ಟಾ | 05–34 | 27-06-2024 | 30 |
| 5 | ಮೇ\|\| ಹಾರಕೂಡ ಶ್ರೀ ಮಿನಲರ್ಸ್ | ಬಸವಕಲ್ಯಾಣ | ಹಿಪ್ಪರಗಾ ಘಾಟ್ | ಲ್ಯಾಟರೈಟ್ | 62/*/4 62/*/5 | ಪಟ್ಟಾ | 05–14 | 12-08-2024 | 30 |
| 6 | ಶ್ರೀ ರೇವಣಸಿದ್ಧಪ್ಪಾ ತಂದೆ ವೀರಣ್ಣಾ ಪಾಟೀಲ್ | ಬಸವಕಲ್ಯಾಣ | ಪಂಡರಗೇರಾ | ಲ್ಯಾಟರೈಟ್ | 89/1 | ಪಟ್ಟಾ | 2–00 | 21-09-2024 | 30 |
| 7 | ಶ್ರೀ ಸಂತೋಷಪಾಟೀಲ್ ತಂದೆ ನಾಗಭೂಷಣ ಪಾಟೀಲ್ | ಹುಮನಾಬಾದ | ಕಲ್ಲೂರು | ಕಟ್ಟಡ ಕಲ್ಲು (ಟ್ರಾಪ್) | 216/4 | ಪಟ್ಟಾ | 1–20 | 13-11-2024 | 30 |
| 8 | ಶ್ರೀ ಧೋಂಢಿಬಾ ನರೋಟ | ಔರಾದ | ನಾರಾಯಣಪೂರ | ಕಟ್ಟಡ ಕಲ್ಲು (ಟ್ರಾಪ್) | 34/*/2 | ಪಟ್ಟಾ | 3–00 | 13-01-2025 | 30 |
| 9 | ಅಕ್ಷಯಪಾಟೀಲ್ ತಂದೆ ರಾಜಶೇಖರ ಪಾಟೀಲ್ | ಹುಮನಾಬಾದ | ಕಲ್ಲೂರು | ಕಟ್ಟಡ ಕಲ್ಲು (ಟ್ರಾಪ್) | 264/*/4 | ಪಟ್ಟಾ | 3–09 | 01-07-2025 | 30 |
| 10 | ಮೇ\|\| ಕಾರ್ಬೋರ್ಕೇರ್ | ಬೀದರ | ಚಟ್ನಳ್ಳಿ | ಲ್ಯಾಟರೈಟ್ | 192/*/2 | ಪಟ್ಟಾ | 3–00 | 11-07-2025 | 30 |

CI-ಮಮನ/204/2025

Deputy Director (Min. Admn)